"ಹೂಮಾಲೆ"

(ಕವನ ಸಂಗ್ರಹ)

ಬರೆದವರು :

ಟಿ. ಮಹಾಬಲೇಶ್ವರ ಭಟ್ಟ

ಸಾಗರ

ಪ್ರಕಾಶಕರು :

ಂಧರ ಪ್ರಕಟನಾಲಯ

ಚಾಮರಾಜಪೇಟೆ, ಸಾಗರ.

"ಹೂಮಾಲೆ"

(ಕವನ ಸಂಗ್ರಹ)

ಬರೆದವರು :

ಟಿ. ಮಹಾಬಲೇಶ್ವರ ಭಟ್ಟ

ಸಾಗರ

ಮೊದಲ ಮುದ್ರಣ: ೧೯೪೪

ಮಾರಾಟದ ಪೂರ್ಣಾಧಿಕಾರಿಗಳು

ಮಹಾನಂದ ಸ್ಟೋರ್ಸ್

ಚಾಮರಾಜಪೇಟೆ, ಸಾಗರ.

ಬೆಲೆ: ೦—೮—೦

ಮುದ್ರಕರು:

ವಿ. ರಾಮಕೃಷ್ಣ ಅಂಡ್ ಕೋ.,

೨೪೪, ಈಸ್ಟ್ ರೋಡ್

ವಿಶ್ವೇಶ್ವರಪುರ: **ಬೆಂಗಳೂರು ನಗರ.**

ವಿವರ

ಈ ಲೇಖಕರ ಇತರ ಗ್ರಂಥಗಳು

ಗುಲಾಬಿ	(ಕತೆಗಳ ಸಂಗ್ರಹ)	೦—೧೨—೦
ತೋರಣ		
ಹೂಮಾಲೆ	(ಕವನ ಸಂಗ್ರಹ)	

(ಅಚ್ಚಿನಲ್ಲಿ)

ಸಾರಥಿ	(ಕವನಸಂಗ್ರಹ)
ಅರಮನೆ	(ಕಾದಂಬರಿ)
ಕಮಲ	(ಕಾದಂಬರಿ)
ಜೀವನ ಸಂಗ್ರಾಮ	(ಜೀವನ ಚರಿತ್ರೆ)

ಪ್ರಕಾಶಕರು :

ಜಲಂಧರ ಪ್ರಕಟನಾಲಯ

ಚಾಮರಾಜಪೇಟೆ, ಸಾಗರ

———

ಇದೇ ಲೇಖಕರು ಬರೆದ

ಸಾಹಿತ್ಯ ಸಾರ್ವಭೌಮ, ಅ. ನ. ಕೃಷ್ಣರಾಯರು

ಸುಮಾರು ೩೫೦ ಪುಟ

(ಸದ್ಯದಲ್ಲೇ ಹೊರಬೀಳುವುದು)

ಅ ರ್ಪ ಣ

ಚಿಕ್ಕಂದಿನಲ್ಲೇ ಕಳೆದುಕೊಂಡ

ನ ನ್ನ ಪೂ ಜ್ಯ ತ ಂ ದೆ ಯ ವ ರ

ಅಡಿದಾವರೆಯಲ್ಲಿ

ಅರಿಕೆ

ಸ್ನೇಹಿತರೇ!

ಇದರಲ್ಲಿರುವ ಬಹು ಪದ್ಯಗಳು "ವಿಶ್ವಕರ್ಣಾಟಕದಲ್ಲಿ" ಈ ಹಿಂದೆಯೆ ಪ್ರಕಟವಾಗಿತ್ತು. ಅವುಗಳನ್ನೆಲ್ಲಾ ಇಲ್ಲಿ ದಪ್ಪ ಅಕ್ಷರದಿಂದ ಅಚ್ಚುಮಾಡಿದೆ. ತಮ್ಮ ಪತ್ರಿಕೆಯಲ್ಲಿ ಅಚ್ಚುಮಾಡಿದ ತಿರುಮಲೆ ತಾತಾಚಾರ್ಯ ಶರ್ಮರಿಗೂ, ಮುನ್ನುಡಿ ಬರೆದುಕೊಟ್ಟ, ಹಿರಿಯ, ಯು. ನಾರಾಯಣ ಭಟ್ಟರಿಗೂ, ಅಂದವಾಗಿ ಮುದ್ರಿಸಿಕೊಟ್ಟ, ವಿ. ರಾಮಕೃಷ್ಣರವರಿಗೂ, ನನ್ನ ಹೃತ್ಪೂರ್ವಕ ವಂದನೆಗಳು.

ಸಾಗರ
೧೫-೩-೪೮

ನಿಮ್ಮೊಲವಿನ,
ಟಿ. ಮಹಾಬಲೇಶ್ವರ ಭಟ್ಟ

ಮುನ್ನುಡಿ

ಶ್ರೀಮಾನ್ ಟಿ. ಮಹಾಬಲೇಶ್ವರಭಟ್ಟರು ಬರೆದ, "ಹೂಮಾಲೆ" ಎಂಬ ಕವನ ಸಂಗ್ರಹಕ್ಕೆ, ಮುನ್ನುಡಿ, ಬರೆಯುವುದಕ್ಕೆ, ಅವಕಾಶ ದೊರೆತುದಕ್ಕಾಗಿ ನನಗೆ ತುಂಬಾ ಹರ್ಷವಾಗುತ್ತದೆ. ಹೆಸರಿಗನ್ವಯಿಸಿ, ಇವರು ಪೋಣಿಸಲು ಆಯ್ದ ಹೂಗಳು, ಸಾಹಿತ್ಯಕ್ಷೇತ್ರದ ಎಲ್ಲೆಯನ್ನು ಸಮೀಪಿಸಿರುವುದು. ಅವರ ನಿರಂತರ ಪರಿಶ್ರಮದ ದ್ಯೋತವಾಗಿರುತ್ತದೆ. ಹೂಗಳ ಪೈಕಿ "ಸಂಪಿಗೆ ಹೂವು" "ಕನ್ನಡ ಕಂದರಿಗೆ" "ಮಗುವಿನ ತಾಯಿ" ಇವು ಓದುಗರ ಮನಸ್ಸನ್ನು ಸೆಳೆಯುವುದರಲ್ಲಿ ಸಂದೇಹವಿಲ್ಲ. ಇವರು, ಈ ಮೊದಲೇ ಬರೆದಿರುವ, "ಗುಲಾಬಿ" ಕಥಾಸಂಕಲನ, ವಾಚಕರ ಕೈಸೇರಿ ಸಾಕಷ್ಟು ಮೆಚ್ಚಿಕೆಯನ್ನು ಪಡೆದಿದೆ. ಒಟ್ಟಿನಲ್ಲಿ, ಸುರಸವಾದ ನಾಡನುಡಿಯನ್ನು ಸುಮಗಳ ಮಾಲೆಯಾಗಿ ವಿರಚಿಸಿ ನಿರ್ಮಲ ಪ್ರೇಮದಿಂದ ಕನ್ನಡ ತಾಯಿಗೆ ಸಲ್ಲಿಸಲು ಮುಂದೆ ಬಂದಿರುವ ಇವರ ಸಾಹಿತ್ಯ ಪ್ರೇಮವು, ಇನ್ನೂ ಹೆಚ್ಚಾಗಿ ಬೆಳೆದು ಈ ಲೇಖಕರಿಂದ ಉಳಿದ ಕೃತಿಗಳು ಬೇಗ ಹೊರಬರಲೆಂದು ಹಾರೈಸುವ,

"ಪ್ರೇಮನಿವಾಸ"
೧-೩-೧೯೪೮

ನಿಮ್ಮೆಲ್ಲರ ಹಿತೈಷಿ
ಯು. ನಾರಾಯಣ ಭಟ್ಟ

ಅಂದವಾದ ಮುದ್ರಣ

ಸೊಗಸಾದ ಕತೆಗಳು

ತೋರಣ

ಕತೆಗಳ ಸಂಗ್ರಹ

ಸಂಪಾದಕರು :

ಟಿ. ಮಹಾಬಲೇಶ್ವರ ಭಟ್ಟ

ಬರಹಗಾರರು :

ಅ. ನ. ಕೃಷ್ಣರಾಯ
ಸೌ. ಸಾವಿತ್ರಮ್ಮ
ಜಲಂಧರ
ರಾ. ವೆ. ಶ್ರೀನಿವಾಸ
ಎಂ. ಗೋಪಾಲಕೃಷ್ಣ ಅಡಿಗ
ಯು. ನಾರಾಯಣ ಭಟ್ಟ
ಕುಳುಕುಂದ, ಶಿವರಾವ್
ಜಡೆ ನಾಗರಾಜರಾವ್

(ಮುಂತಾದವರು)

ಬೆಲೆ : ೨—೦—೦

ಪ್ರಕಾಶಕರು :

ಜಲಂಧರ ಪ್ರಕಟನಾಲಯ

ಚಾಮರಾಜಪೇಟೆ, ಸಾಗರ

ಭಾವಗೀತ

ಓ ಶಿಷ್ಯಬಾರೆಂದು ಕರೆಯುತಿದೆ ಭಾವ
ಕರೆ ಕರೆದು ನೀಡುತಿದೆ ಭಾವನಾಗೀತ
ಕೊರೆ ಕೊರೆದು ಹರಡುತಿದೆ ಕರ್ತವ್ಯರೂಪ
ಮಾನಸಿಕ ಒತ್ತಡವು ನಾ ಬರೆದಗೀತ

ಅರ್ಪಣೆ

ಕನ್ನಡದ ತಾಯಕ್ಕ
ಕವನ ಮಾಲೆಯು ಮಾಡಿ
ಕನ್ನಡಾಂಬೆಯುತಿರಕೆ
ಪುಸ್ತಕದ ರೂಪದಲಿ
ಅರ್ಪಿಸಿಹೆನು
ಅರ್ಪಣವ ಈರೀತಿ
ಕೊಡುತಲಿಹೆನು

ಮಗುವಿನ ತಾಯಿ

೧

ಸೊರಗಿಬೆಳದಿಹಳಮ್ಮ
ಮೋಹಪಾಶದೊಳಿಂದು
ಮನೆಯ ಬೆಳಗುವಾಪೂವು
ಪುಟ್ಟಿಬಂತು

೨

ಬೆಳಕಾಗಿ ಬೆಳಗಿನಾ
ಪ್ರೇಮದಾಮಗುವಿಂದು
ನರ್ತಕಿಯರೂಪದಲಿ
ಕುಣಿದುಬಂತು

೩

ಬೆಳಕು ಚಂದ್ರನಬೆಳಕು
ನೆರೆ ಎಮ್ಮ ಬಾಳ್ ಮೆರಗು
ಕಡೆಗೆ ಪುಟ್ಟಿತು ನಮ್ಮ
ಮನೆಯ ಸಿಂಗಾರ

೪

ವರಮಹೇಶ್ವರತಾಯಿ
ಬಾರೆಂದುಕರೆದಿಂದು

೪

ಎನಗೆ ಕೊಟ್ಟಿಹಳಿಂದು
ಮಗುವೆಂಬಹಾರ

೫

ಆಸೆ ಎಂಬುದ ಇಂದು
ರನ್ನದಾಸಿರಿಯಾಗಿ
ಮನೆಲಿ ಹುಟ್ಟಿತು ಇಂದು
ಬಾಳಿನಲ್ಲಿ

೬

ಹೊನ್ನಿನಾರೂಪದೊಳು
ವಜ್ರದಾಬೆಳಕಾಗು
ಕನ್ನಡದ ತಾಯ್ತನದಿ
ಬೆಳಗಲಿಲ್ಲಿ

೭

ಕೆಚ್ಚೆದೆಯ ಗಂಡುಗಳ
ಹಿಂದೆ ತಳ್ಳಿಸುವಂತೆ
ಶೂರನಾಗುದಿಸಿದಾ
ಎನ್ನ ಮಗುವಾಗಿ

೮

ಕತ್ತಿಯನು ಹಿಡಿದೆತ್ತಿ
ಮುಂಬರುವ ಶೂರರನು

ಕಡೆಗೊತ್ತಿ ಮುಂಬರುವ
ವೀರನಾಗಿ

೯

ಹೂವರಳಿ ಪರಿಮಳವ
ಎಲ್ಲೆಡೆಯು ಬೀರ್ವಂತೆ
ಲೋಕವನೆ ಬೆಳಗಿಸುವ
ನಮ್ಮ ಕುವರಾ

೧೦

ನಿನಗಿತ್ತ ಹರಕೆ ಇದ
ಪ್ರೀತಿಯಿಂ, ಸ್ವೀಕರಿಸಿ
ಮಗನಿದನೆ ಬೆಳಸಿಕೊ
ನಮ್ಮ ಕುಲವಾ

........ಗೆ

ವಾಯುವೇಗದಿ ಇಳಿದು
ಕಮಲೆ ನೀ ಬಂದೆ
ಬಂದೆನ್ನ ಸತಿಯಾಗಿ
ಮನೆಯೊಳಗೆ ನಿಂದೆ
ಸುಂದರದ ಮನೆಯಲ್ಲಿ
ತೋರಣದ ರೂಪದೊಳು
ನೀ ಒಪ್ಪುತ್ತಿದ್ದೆ
ಅದೆ ಕಣ್ಣನೋಡಿದೊಡೆ
ನಾನೋಡಿ ಬಂದೆ
ಬಂದು ಗುಡಿಸಲ
ಬಾಗಿಲೆಡೆಗೆ ನಿಂದೆ
ಕಮಲೆ ನಿನ್ನೀ ಆಳ
ಬಲುದೊಡ್ಡದಿಹುದು
ನಿನ್ನ ಜೊತೆಗಿರುವುದೇ
ನನಗೊಂದು ಸುಃಖವು
ಆದರೂ ನನಗೊಂದು
ಸುಖವತೋರು
ನಿನ್ನ ಚೆಲುವಿಗೆ ನಾನು—

ಮನಸೋತು ಬಂದೆ,
ವಾಯುವೇಗದಿ ಇಳಿದು
ಕಮಲೆ ನೀ ಬಂದೆ
ಬಂದೆನ್ನ ಸತಿಯಾಗಿ
ಮನೆಯೊಳಗೆ ನಿಂದೆ

ಕನ್ನಡ ಕಂದರಿಗೆ

೧

ಏಳಿರಿ ಕನ್ನಡ ಕಂದರೆ
ನಮ್ಮಯ ನಾಡನು ಬೆಳಗಿಸುವ
ಕನ್ನಡ ಕಂದರು ಎಂಬ ಹೆಮ್ಮೆಯಲಿ,
ಎದೆಯನು ತಟ್ಟಿಸುವ
ಮೊದಲಿಗೆ ಕಲಿತಿಹ ನಮ್ಮಯ ಭಾಷೆ,
ಮನೆಯಲಿ ನಮ್ಮವರಾಡುವ ಭಾಷೆ,
ರನ್ನ ಪಂಪನು ಹಾಡಿದ ನಮ್ಮ ಸವಿ ಭಾಷೆ,
ಒಬ್ಬರು ಮರೆಯದ ಈ ಭಾಷೆ
ಈ ಕವಿತೆಯ ಬರೆದಿಹ ಸವಿ ಭಾಷೆ ಏಳಿರಿ.

೨

ಗಂಧವು ಹೊನ್ನೆಯು ಬೆಳದಿಹ ನಾಡು
ಸುತ್ತಲು ಮೇರೆಗೆ ಗುಡ್ಡವೆ ನಾಡು
ನಮ್ಮಾ ಕನ್ನಡನಾಡು ಬೆಳದೀ ಚೆಲುವಿನಬೀಡು
ಇರುವುದು ಈ ಕನ್ನಡ ನಾಡಿನೊಳು
ಕನ್ನಡ ಕಂದರ ಭುಜಭಲವು ಏಳಿರಿ
ಕನ್ನಡನಾಡದು ಒಂದುಸಿರಿ
ಕನ್ನಡಮಾತನು ಮೊದಲು ಕಲಿ

ಸೇವೆಯು ಮಾಡುತ, ನಮ್ಮಾಭಾಷೆಯು
ಬೆಳಗಿಸಿರಿ
ಅನ್ಯರಭಾಷೆಯು ತೊಲಗಿಸಿರಿ
ನಮ್ಮಯು ಭಾಷೆಯು ಮುಂದೆ ತರಿ
|| ಏಳಿರಿ ||

ಸಂಪಿಗೆ ಹೂ

ಹೋಗಲು ಎಲ್ಲಿಯೂ
ಮನೆಯೇ ಇಲ್ಲ,
ಆಡುವೆನೆಂದರೆ
ಅಕ್ಕನು ಇಲ್ಲ.
ಕವಿತೆಯು ರಚಿಸಲು
ಮನಸೇ ಇಲ್ಲ.
ಅಂಗಳದಲ್ಲಿಹ—
ಸಂಪಿಗೆಹೂವೆ,
ನಿನ್ನನು ಕುರಿತೇ
ಬರೆಯುವೆನು.
ನೀನು ಬರೆಯಲಿ
ಹೂವೇ ಹೇಳು
ಮನಸಿಗೆ ಕಂಡುದ
ಹೇಳುವೆ ಕೇಳು.
ಮಿಣುಗುವ ದೀಪಕೆ
ಹೋಲಿಸಲಾರೆ
ನಿನಗಿದು ಅಪಮಾನ.
ಮಿಂಚಿನ ಹುಳುವಿಗೆ

ಹೋಲಿಸಲಾರೆ,
ನಿನಗಿದು—ಸುಮ್ಮಾನ.
ಹೂವಿನ ಗುಂಪಿನ
ರಾಶಿಯೊಳೆಲ್ಲಾ
ನಿನ್ನನು ಆರಿಸಿ
ತೆಗೆಯುವರು.
ಸಂಪಿಗೆ ಹೂವಿನ
ಪರಿಮಳವೆಂದರೆ
ಮೂಗಿಗೆ, ಗಮ, ಗಮ
ವೆನ್ನುವುದು.
ಹೋಗಲು—ಮನೆಯು
ದೊರಕುವವರೆಗೂ
ಆಡಲು ಅಕ್ಕನು
ಬರುವವರೆಗೂ
ನಿನ್ನನು ಕುರಿತೇ
ಹಾಡುವೆನು.

ಎಲ್ಲಿ?

ಎತ್ತ ತಿರುಗಿದರಿಲ್ಲ.
ಇತ್ತ ಬಂದರು ಇಲ್ಲ.
ಸುತ್ತು ಮುತ್ತಿನ ಗುಡ್ಡ—
ಬೆಟ್ಟವನಿಳಿದರಿಲ್ಲ.
ಕಾಲು ಸೋಲುವ ತೆರದಿ—
ತಿರುಗಿ ಬಂದೆನು ನಾನು.
ಆದರೂ ನಾ ಕಾಣೆ ಅವಳು ಎಲ್ಲಿ ?

೨

ವಾಹನವ ಹತ್ತಿದೆನು
ಬಂದರವ ದಾಟಿದೆನು.
ನಗರಗಳ ಮೆಟ್ಟಿದೆನು.
ಅವಳಿಗಾಗಿ,
ಕಟ್ಟಿಸಿದೆ ಅರಮನೆಯು
ಜೀವ ಅದರೊಳಗಿಟ್ಟೆ.
ಎಷ್ಟು ಹುಡುಕಿದರ್ಕಾಣೆ
ಅವಳು ಎಲ್ಲಿ?

೩

ಹರಕೆ ಮಂತ್ರವನೆಲ್ಲ
ಲೆಕ್ಕವಿಲ್ಲದೆ ಮಾಡಿ

ತ್ಯಾಗಿ ಎಂದೆನಿಸಿದರು
ಅವಳೆಲ್ಲಿ ನಾಕಾಣೆ
ಏನು ಪೇಳಲಿ ನಾನು.
ಅವಳ ದನಿ ಕೇಳೆ
ಆದರೂ ನಾಕಾಣೆ
ಅವಳು ಎಲ್ಲಿ ?

೪

ಸುರಿಯುವಾ ಮುಳೆಯಲ್ಲಿ
ಬೀಸುವಾ ಗಾಳಿಯಲಿ,
ಭೋರ್ಗರೆವ ನದಿಯಲ್ಲಿ
ಅಡಗಿರುವೆ ಏನು.
ತೇಲುವಾ ಮುಗಿಲಲ್ಲಿ
ಹಿರಿದಾದ ಆಳದಲಿ
ಹುದುಗಿಹಳೊ ನಾ ಕಾಣೆ.
ಅವಳು ಎಲ್ಲಿ?

೫

ಎಲ್ಲುಹುಡುಕಿದರಿಲ್ಲ
ಈ ಬುವಿಯೊಳವಳು.
ಕಂಡಕಂಡವರನ್ನು—
ಕೇಳಿ ಸೋತೆನು ನಾನು.
ಆದರೂ ಸಿಗಲಿಲ್ಲ—

ಹುಡುಕಿಸೋತರು ಇಲ್ಲ.
ಎನ್ನೆದೆಯು ಬರಿದಾಯ್ತು,
ಅವಳು ಎಲ್ಲಿ ?

(ಒಂದು ಇಂಗ್ಲಿಷ್ ಕವಿತೆಯ ಆಧಾರದಿಂದ)

ನೋಟ

ಸಾಗರದ ಊರಿನ ಪೂರ್ವ ದಿಕ್ಕಿನಲಿ,
ಸೂರ್ಯನು ಉದಿಸಿತ್ತು-ಅರಳದ
ಸೂರ್ಯನು ಉದಿಸಿತ್ತು.
ಹುಟ್ಟಿದ ಸೂರ್ಯನ-ಹೊನ್ನಿನ ರೇಖವು,
ತೇಲಾಡುತಲಿತ್ತು-ನಗುತ
ತೇಲಾಡುತಿತ್ತು.

೨

ಪಶ್ಚಿಮದಿಕ್ಕಿನ ತಣ್ಣನ ಗಾಳಿಯು
ಮೆತ್ತನೆ ಬೀಸಿತ್ತು—ಮೆಲ್ಲನೆ,
ಕುಣಿಯುತ ಬೀಸಿತ್ತು.
ಬಾಗಿಲಹತ್ತಿರ "ರತ್ನ"ಳ ಕಣ್ಗಳು,
ಹೊಂಚುತ ಕಾದಿತ್ತು—ಅರಳಿಸಿ,
ಕಣ್ಣನು ತೂರಿತ್ತು.

೩

ಮೌನದಿ ನಗುತಲಿ—
ಅಲ್ಲಿಯೆ ನಿಂತಿರೆ
ಆಲೋಚನೆಯಿಂದ—ಯುವತಿಯು
ಕಾಯುತ ದೂರಿಂದ.
ಮೋಡದ ಮುಸುಕನು—
ಹಗುರೆನೆ ತೆಗೆಯುತ,—
ಸೂರ್ಯನುವುದಿಸಿತ್ತು—
"ರತ್ನಳ"ರೀತಿಯ ಕಂಡಿತ್ತು

ಜಲಂಧರ ಪ್ರಕಟನಾಲಯ

ಚಾಮರಾಜಪೇಟೆ, ಸಾಗರ

ಪುಸ್ತಕ ವ್ಯಾಪಾರಿಗಳು ಮತ್ತು ಪ್ರಕಾಶಕರು

ಇವರ ಪ್ರಕಟಣೆ

★ "ಗುಲಾಬಿ"		ಟಿ ಮಹಾಬಲೇಶ್ವರ ಭಟ್ಟ
"ವೀರನಾರಿ"		ಹು. ಕಾ. ತಿಮ್ಮಪ್ಪ
"ತೋರಣ"	ಸಂಪಾದಕ :	ಟಿ. ಮಹಾಬಲೇಶ್ವರ ಭಟ್ಟ
ಹೂಮಾಲೆ		ಟಿ. ಮಹಾಬಲೇಶ್ವರ ಭಟ್ಟ

ಮಾರಾಟದ ಪೂರ್ಣಾಧಿಕಾರಿಗಳು

ಮಹಾನಂದ, ಸ್ಟೋರ್ಸ್

ಚಾಮರಾಜಪೇಟೆ

ಸಾಗರ

(★ ಈ ಗುರುತಿನ ಪುಸ್ತಕ ತೀರುತ್ತಾ ಬಂದಿದೆ)
